ಮೈನ್ಸ್ ಎಕ್ಸ್‌ಪೋರ್ಟ್ ಏಕೆ ಮಾಡಬೇಕಾಗಿತ್ತು? ಮರಳನ್ನು ಏಕೆ ತೆಗೆಯಲಿಕ್ಕೆ ಬಿಡಬೇಕಾಗಿತ್ತು? ಇದಕ್ಕೆ ತಾವು ಉತ್ತರವನ್ನು ಹೇಳಬೇಕು

**ಶ್ರೀ ಕೆ ಜಿ ಬೋಪಯ್ಯ .** ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ task force ಕಮಿಟಿ ಏನು ಇದೆ ಅದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಏನು ಮಾಡುತ್ತಿದ್ದಾರೆಂದರೆ, ಸ್ವಂತ ಉಪಯೋಗಕ್ಕೆ ಮರಳು ತೆಗೆದುಕೊಂಡು ಹೋದರೆ, ಅದನ್ನು ಸೀಜ್ ಮಾಡಿ ಕೇಸ್ ಹಾಕಿ ಅಲ್ಲಾ ಮಾಡುತ್ತಾರೆ ಆದರೆ ನಿರಂತರವಾಗಿ ಕೇರಳಕ್ಕೆ ಸಾಗಿಸುವಂಥದ್ದನ್ನು ತಡೆಗಟ್ಟುವಲ್ಲಿ ನಾವು ವಿಫಲತೆಯನ್ನು ಕಾಣುತ್ತಿದ್ದೇವೆ ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ ಇದನ್ನು ಗ್ರಾಮಪಂಚಾಯಿತಿಗೆ ಕೊಟ್ಟರೆ, ಸ್ಥಳೀಯವಾಗಿ ಅದನ್ನು ನಿಯಂತ್ರಿಸಬಹುದು ಎನ್ನುವುದು ನನ್ನ ಸಲಹೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನದಲ್ಲಿರಿಸಿಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ

**ಶ್ರೀ ಹೆಚ್ ಡಿ ಕುಮಾರಸ್ವಾಮಿ** ಮರಳು ಸಾಗಾಣಿಕೆಯ ವಿಷಯದಲ್ಲಿ ಸದಸ್ಯರು ಅನೇಕ ಸಲಹೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಹಿಂದೆ ಇದರ ಬಗ್ಗೆ ಈಗಾಗಲೇ ಗ್ರಾಮಪಂಚಾಯಿತಿಗೆ ಅಧಿಕಾರ ಕೊಟ್ಟು ಮತ್ತೆ ಅದನ್ನು ವಾಪಸ್ ಪಡೆದಂಥ ಘಟನೆ ಇದೆ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಸದಸ್ಯರೇನು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಈ ವಿಷಯದಲ್ಲಿ ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಲು ಪರಿಶೀಲಿಸುತ್ತದೆ

**ಶಿರಾಡಿ ಘಾಟ್ ರಸ್ತೆ**

156 (737) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು-ಬೆಂಗಳೂರು ಹೆದ್ದಾರಿಯಲ್ಲಿ ಶಿರಾಡಿ , ಘಾಟ್ ಪ್ರದೇಶದಲ್ಲಿ ಪ್ರತಿ ದಿನವೂ ಉಂಟಾಗುತ್ತಿರುವ ಹೆದ್ದಾರಿ ತಡೆಯಿಂದಾಗಿ ಪ್ರಯಾಣಿಕರಿಗೆ ಹಾಗೂ ಇತರ ಸಂಚಾರ ವ್ಯವಸ್ಥೆಗೆ ಆಗುತ್ತಿರುವ ಗಂಭೀರ ಸಮಸ್ಯೆಗಳನ್ನು ತಪ್ಪಿಸುವ ನಿಟ್ಟಿನಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು,

ಆ) ಘಾಟ್ ಪ್ರದೇಶದ ತಿರುವಿನಲ್ಲಿ ಪದೇ ಪದೇ ಟ್ಯಾಂಕರ್‌ಗಳು, ಭಾರೀ ವಾಹನಗಳು ಉರುಳುತ್ತಿರುವ ಮೂಲಕ ಹೆದ್ದಾರಿ ಸಂಚಾರಕ್ಕೆ ತಡೆ ಉಂಟಾಗುವುದರಿಂದ ವಿಶೇಷತ ರಾತ್ರಿ ವೇಳೆಯಲ್ಲಿ ಪ್ರಯಾಣಿಕರು ಅನುಭವಿಸುವ ಸಂಕಷ್ಟಗಳ ನಿವಾರಣೆಗಾಗಿ ಸರ್ಕಾರದ ತ್ವರಿತ ಕ್ರಮಗಳೇನು,

ಇ) ಈ ಹೆದ್ದಾರಿ ನವೀಕರಣದ ಸಮಗ್ರ ಕಾಮಗಾರಿಯ ರೂಪುರೇಷೆಗಳನ್ನು ಸರ್ಕಾರ ಕ್ರಿಯಾ ಯೋಜನೆಯನ್ನು ರೂಪಿಸಿದೆಯೇ,

ಈ) ಯೋಜನೆಯ ಕಾಮಗಾರಿಯು ಸಮಯ ನಿರ್ಬಂಧನೆಯನ್ನು ಹೊಂದಿ ಸಕಾಲದಲ್ಲಿ ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ–48ರ ಬೆಂಗಳೂರು–ಮಂಗಳೂರು ರಸ್ತೆಯ ಕಿಮೀ 227 00 ರಿಂದ 264 00 ರವರೆಗೆ ರಸ್ತೆಯ ಶಿರಾಡಿ ಘಾಟ್ ಪ್ರದೇಶದಲ್ಲಿ ಹಾದು ಹೋಗಿರುತ್ತದೆ ಈ ಹೆದ್ದಾರಿಯಲ್ಲಿ ಉಂಟಾದ ಗುಂಡಿಗಳನ್ನು ಮುಚ್ಚಲು ವಾರ್ಷಿಕ ನಿರ್ವಹಣೆ ಹಾಗೂ ಪ್ರವಾಹ ಹಾನಿ ದುರಸ್ತಿಯಡಿಯಲ್ಲಿ ಕ್ರಮಕೈಗೊಳ್ಳಲಾಗಿದೆ ಹಾಗೂ ಅಭಿವೃದ್ಧಿಗೆ ಕೆಳಕಂಡಂತೆ ಅಂದಾಜು ಪಟ್ಟಿಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿರುತ್ತದೆ

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಕೆಲಸದ ಈಗಿನ ಹಂತ |
|---|---|---|---|
| 1 | ರಾಹೆ–48ರ ಕಿಮೀ 226 00 ರಿಂದ 237 00 ರವರೆಗೆ ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ (ಜಾಬ್ ಸಂ 048–ಕೆಎನ್‌ಟಿ–2006–447) | 693 64 | ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದೆ |
| 2 | ರಾಹೆ–48ರ ಕಿಮೀ 237 00 ರಿಂದ 247 00 ರವರೆಗೆ (ಶಿರಾಡಿ ಘಾಟ್‌ನಲ್ಲಿ) ತಿರುವುಗಳಿಗೆ ಕಾಂಕ್ರೀಟ್ ಪೇವ್‌ಮೆಂಟ್ ಒದಗಿಸುವುದು | 842 92 | ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದೆ |

| | | | |
|---|---|---|---|
| | (ಜಾಬ್ ಸಂ 048–ಕೆಎನ್‌ಟಿ–2006–483) | | |
| 3 | ರಾ ಹೆ 48ರ ಕಿಮೀ 237 00 ರಿಂದ 264 00 ರವರೆಗೆ (ಶಿರಾಡಿ ಘಾಟ್ ರಸ್ತೆ) ರಸ್ತೆ ಅಭಿವೃದ್ಧಿ (ಡಾಂಬರೀಕರಣ) (ಜಾಬ್ ಸಂ 048–ಕೆಎನ್‌ಟಿ–2006–485) | 1424 18 | ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದೆ |

ಆ) ಶಿರಾಡಿ ಘಾಟ್ ರಸ್ತೆಯಲ್ಲಿ ತಿರುವುಗಳಿಗೆ ಕಾಂಕ್ರೀಟ್ ಪೇವ್‌ಮೆಂಟ್ ಒದಗಿಸಲು ರೂ 843 00 ಲಕ್ಷಗಳ ಅಂದಾಜಿಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿದ್ದು ಟೆಂಡರ್ ಹಂತದಲ್ಲಿದೆ

ಶಿರಾಡಿ ಘಾಟ್ ಪ್ರದೇಶದಲ್ಲಿ ಟ್ಯಾಂಕರುಗಳು, ಭಾರೀ ವಾಹನಗಳು ಉರುಳಿ ಸಂಚಾರ ತಡೆಯುಂಟಾಗುವುದನ್ನು ತಪ್ಪಿಸಲು ಸೂಕ್ತ ಸಂಚಾರಿ ವ್ಯವಸ್ಥೆಗೆ ಕ್ರಮಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಸಾರಿಗೆ ಇಲಾಖೆಗೆ ಹಾಗೂ ಪೊಲೀಸ್ ಇಲಾಖೆಗೆ ವಿನಂತಿಸಲಾಗಿದೆ

ಇ) ನೆಲಮಂಗಲ–ಹಾಸನ ಚತುಷ್ಪಥ ರಸ್ತೆ ಕಾಮಗಾರಿಯನ್ನು NHAI ವತಿಯಿಂದ ಕೈಗೊಳ್ಳಲಾಗುತ್ತಿದೆ ಹಾಸನ–ಬಿ ಸಿ ರೋಡ್ ಚತುಷ್ಪಥ ರಸ್ತೆಯನ್ನಾಗಿಸಲು Consultant ನೇಮಿಸಲು ಪ್ರಕ್ರಿಯೆಯು ಜಾರಿಯಲ್ಲಿದೆ

ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ ಹಾಗೂ ನವೀಕರಣಕ್ಕೆ ಕೇಂದ್ರ ಸರ್ಕಾರವು ಮೇಲಿನಂತೆ 3 ಅಂದಾಜು ಪಟ್ಟಿಗಳನ್ನು ಮಂಜೂರು ಮಾಡಿದ್ದು ಟೆಂಡರು ಪ್ರಕ್ರಿಯೆಯು ಜಾರಿಯಲ್ಲಿದೆ

ಈ) ಮಂಜೂರಾದ ಮೇಲಿನ 3 ಕಾಮಗಾರಿಗಳಿಗೆ ಟೆಂಡರು ವಿಧಿ ವಿಧಾನ ಪೂರ್ಣಗೊಂಡ ನಂತರ, ಒಂದು ವರ್ಷದ ಕಾಲಾವಧಿ ನಿಗಧಿಪಡಿಸಲಾಗಿದೆ

**ಶ್ರೀ ಜೆ ಕೃಷ್ಣ ಪಾಲೇಮಾರ್** ಶಿರಾಡಿ ಘಾಟ್‌ನಲ್ಲಿ ರಸ್ತೆ ಬಹಳಷ್ಟು ಹದಗೆಟ್ಟು ಬಹಳ ಶಿಥಿಲಗೊಂಡಿದೆ ಈಗ ಗುಂಡಿಗಳನ್ನು ರಿಪೇರಿ ಮಾಡುತ್ತಿದ್ದಾರೆಂದು ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ ಗುಂಡಿಗಳನ್ನು ರಿಪೇರಿ ಮಾಡಿದರೆ ಸಾಲದು ಅಲ್ಲಿ ಸುಮಾರು ಮೂರು ತಿಂಗಳಿನಿಂದ ಬಸ್‌ಗಳು ತಡೆಯಾಗುತ್ತವೆ ಆ ಮಾರ್ಗದ ಮಧ್ಯೆದಲ್ಲಿ ಟ್ಯಾಂಕರ್‌ಗಳು ಉರುಳಿ

ಬಿದ್ದ ಪರಿಣಾಮವಾಗಿ ಬಸ್‌ಗಳು ದಿನಗಟ್ಟಲೇ ಅಲ್ಲಿ ತಡೆಯಾಗುವುದರಿಂದ ಪ್ರಯಾಣಿಕರು ಕೂಡ ಅಲ್ಲಿಯೇ ಇರಬೇಕಾದ ಅನೇಕ ಪ್ರಸಂಗಗಳು ಇವೆ ಇದಕ್ಕೆ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಶಿರಾಡಿ ಘಾಟ್‌ನಲ್ಲಿ ಮಾಡಬೇಕು ಕೆಎಸ್‌ಆರ್‌ಟಿಸಿಯು ಇದರಿಂದಾಗಿ ಸುಮಾರು 97 ಲಕ್ಷ ರೂಪಾಯಿ ನಷ್ಟವನ್ನು ಅನುಭವಿಸಿದೆ ಎನ್ನುವ ವರದಿ ಕೂಡ ಕೊಟ್ಟಿದ್ದಾರೆ ಹೀಗಾಗಿ ಶಿರಾಡಿಘಾಟ್ ಏನು ಶಿಥಿಲವಾಗಿದೆ ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಟ್ಟು ಸರಿಮಾಡಬೇಕು ಜೊತೆಗೆ ಆ ಮಾರ್ಗದಲ್ಲಿ ಬಸ್‌ಗಳು ಇಡೀ ದಿನ ಬ್ಲಾಕ್ ಆಗಿ ನಿಂತಾಗ, ಅಲ್ಲಿ ಯಾವುದೇ ವ್ಯವಸ್ಥೆಯಿಲ್ಲ ಪೊಲೀಸ್ ವ್ಯವಸ್ಥೆಯಿಲ್ಲ ಅಲ್ಲಿ ಬಸ್‌ಗಳು ಬಿದ್ದಾಗ ಅಥವಾ ಟ್ಯಾಂಕರ್ ಬಿದ್ದಾಗ ಅವುಗಳನ್ನು ಕೂಡಲೇ ಎತ್ತಿ ರಸ್ತೆಯನ್ನು ಕ್ಲಿಯರ್ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ ಅಲ್ಲಿ ಕ್ರೇನ್ ಒದಗಿಸುವಂಥ ವ್ಯವಸ್ಥೆಯಾಗಬೇಕು ಅಲ್ಲಿ ಪೊಲೀಸ್ ವ್ಯವಸ್ಥೆಯನ್ನು ಹಾಕಿದರೆ ಒಳ್ಳೆಯದು ಎಂದು ಹೇಳುತ್ತೇನೆ ಇದರ ಜೊತೆಗೆ ಅಲ್ಲಿ ಒಂದು ಶೌಚಾಲಯವನ್ನು ನಿರ್ಮಿಸಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ

**ಶ್ರೀಮತಿ ಶಕುಂತಲಾ ಟಿ ಶೆಟ್ಟಿ** ಶಿರಾಡಿ ಘಾಟ್‌ನಲ್ಲಿ ಸಾಧಾರಣವಾಗಿ, ಸಕಲೇಶಪುರದಿಂದ ಸ್ವಲ್ಪ ಕೆಳಗಿನವರೆಗೆ ಮಾತ್ರ ನಮಗೆ ಮೊಬೈಲ್ ಸಿಗ್ನಲ್ ಸಿಗುತ್ತಿದೆ ಆಮೇಲೆ ನೆಲ್ಯಾಡಿಯವರೆಗೆ ಸಾಧಾರಣ 40 ಕಿಲೋಮೀಟರ್‌ಗಳ ಅಂತರದಲ್ಲಿ ನಮಗೆ ಯಾವುದೇ ವ್ಯವಸ್ಥೆ ಇಲ್ಲದಿರುವುದರಿಂದ ನಮಗೆ ಯಾರನ್ನು ತಲುಪುವುದಕ್ಕಾಗುತ್ತಿಲ್ಲ ಆದಕಾರಣ ಅಲ್ಲಿ ಒಂದು ಮೊಬೈಲ್ ಟವರ್ ಆಗಬೇಕು ಜೊತೆಗೆ ಸಾಧಾರಣವಾಗಿ ಎರಡು ಅಥವಾ ಮೂರು ಕಿಲೋಮೀಟರ್ ಒಳಗೆ, ಮಾನ್ಯ ಪಾಲೇಮಾರ್‌ರವರು ಹೇಳಿದ ಹಾಗೆ, ಸಾರ್ವಜನಿಕ ಶೌಚಾಲಯಗಳನ್ನು ಮಾಡುವುದು ಒಳ್ಳೆಯದು ಏಕೆಂದರೆ, ಪ್ರತಿ ಟರ್ನ್‌ಗಳಲ್ಲಿ ಅದರಲ್ಲೂ ಮಳೆಗಾಲದಲ್ಲಂತೂ ನಿತ್ಯ ನಿರಂತರವಾಗಿ ಅಲ್ಲಿ ಬ್ಲಾಕ್ ಆಗುತ್ತದೆ ಅಲ್ಲಿ ಮಹಿಳೆಯರಿಗೆ ಬಹಳಷ್ಟು ಕಷ್ಟವಾಗುತ್ತದೆ, ಅದಕ್ಕೆ ಯಾವುದಾದರೊಂದು ಸೂಕ್ತ ವ್ಯವಸ್ಥೆ ಮಾಡಬೇಕು ಜೊತೆಗೆ ಸಕಲೇಶಪುರ – ಗುಂಡ್ಯಾ–ಕೆಂಪುಹೊಳೆ ಮೂರುಕಡೆ ಕ್ರೇನ್‌ಗಳನ್ನು ಇರಿಸಿ ಅದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಅವರ ಪರವಾಗಿ ಕೇಳಿಕೊಳ್ಳುತ್ತೇನೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** . ಆಯ್ದ ಭಾಗದಲ್ಲಿ ಶಿರಾಡಿ ಘಾಟ್‌ನಲ್ಲಿ ಕಾಂಕ್ರೀಟ್ ಮಾಡುತ್ತೇವೆಂದು ತಾವು ಉತ್ತರಿಸಿದ್ದೀರಿ ಉಳಿದ ಭಾಗದಲ್ಲಿ ಗುಂಡಿ ಮುಚ್ಚಿದೆ ಈ ಮಳೆಗಾಲದಲ್ಲಿ ಪೂರ್ತಿ ಕಿತ್ತು ಹೋಗಿ ಪುನ ಇಂದಿನ ಪರಿಸ್ಥಿತಿ ಬರುತ್ತದೆ ಈಗಲೇ ಕೆಲವು ತಿರುವುಗಳಲ್ಲಿ ಹೋಗಲಿಕ್ಕೆ ಆಗುತ್ತಿಲ್ಲ ಅದಕ್ಕೆ ಶಾಶ್ವತವಾದ ಪರಿಹಾರ ಎಷ್ಟು ಬೇಗ ಕಂಡು ಹಿಡಿಯುತ್ತೀರಿ ಎನ್ನುವುದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು ಕುಂದಾಪುರದವರಿಗೆ ನೀವು ಹುಡುಕಬೇಕು

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಸದಸ್ಯರ ಶಿರಾಡಿ ಘಾಟ್‌ನಲ್ಲಿ ಸಕಲೇಶಪುರದಿಂದ ಶಿರಾಡಿ ಘಾಟ್‌ವರೆಗೆ 40 ಕಿಲೋಮೀಟರ್ ರಸ್ತೆ ಹಾಸನದಿಂದ ಹೋದರೂ ರಸ್ತೆ ಪೂರ್ತಿ ಹದಗೆಟ್ಟಿದೆ ಶಿರಾಡಿ ಘಾಟ್‌ನಲ್ಲಿ ದಿನಕ್ಕೆ 5 ರಿಂದ 6 ಸಾವಿರ ಲಾರಿಗಳು ಹೋಗುತ್ತವೆ ಇದು ಕೇಂದ್ರ ಸರ್ಕಾರಕ್ಕೆ ಸೇರಿದ ರಾಷ್ಟ್ರೀಯ ಹೆದ್ದಾರಿ ರಸ್ತೆ ಈಗಾಗಲೇ ನಾನು ಕೇಂದ್ರ ಸರ್ಕಾರದ ಸಚಿವರನ್ನು ಎರಡು ಮೂರು ಸಾರಿ ಭೇಟಿ ಮಾಡಿ, ಈ 40 ಕಿಲೋಮೀಟರ್‌ಗೆ ಫೋರ್ ಲೈನ್ ಕಾಂಕ್ರೀಟ್ ರಸ್ತೆ ಮಾಡಬೇಕು, ಇಲ್ಲದೆ ಹೋದರೆ ತಡೆಯುವುದಿಲ್ಲ, ನಾವು ಎಷ್ಟೇ ಟಾರು ಹಾಕಿದರೂ ರಸ್ತೆ ತಡೆಯುವುದಿಲ್ಲವೆನ್ನುವ ನಮ್ಮ ಇಲಾಖಾಧಿಕಾರಿಗಳ ಅಭಿಪ್ರಾಯ ಇದೆ ಎಂಬ ವಿಚಾರವನ್ನು ತಿಳಿಸಿರುತ್ತೇನೆ ಅದರಂತೆ ಸಧ್ಯಕ್ಕೆ ಈಗ 29 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಮಂಜೂರಾತಿ ಮಾಡಿದೆ ನಾವು ಟೆಂಡರ್ ಕರೆದಿದ್ದೇವೆ, ಟೆಂಡರ್ ಅನುಮತಿಗಾಗಿ ದೆಹಲಿಗೆ ಕಳುಹಿಸಿದ್ದೇವೆ, ದೆಹಲಿಯಿಂದ ಅನುಮತಿ ಬಂದ ಮೇಲೆ ಕೆಲಸ ಪ್ರಾರಂಭ ಮಾಡಲಾಗುವುದು

**ಶ್ರೀ ಜೆ ಸಿ ಮಾಧುಸ್ವಾಮಿ** ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿಯಿಂದ ಮಂಗಳೂರಿಗೆ ಒಂದು ವಿಶೇಷ ರಸ್ತೆ ಮಾಡಿ ಲಾರಿಗಳಿಂದ ಟೋಲ್ ವಸೂಲ್ಮಾಡುತ್ತೇವೆಂದು ಬಜೆಟ್‌ನಲ್ಲಿ ಸನ್ಮಾನ್ಯ ಸಿದ್ದರಾಮಯ್ಯನವರು ಆರ್ಥಿಕ ಇಲಾಖೆಯ ಸಚಿವರಾಗಿದ್ದಂಥ ಸಂದರ್ಭದಲ್ಲಿ ಹೇಳಿದ್ದರು ಈ ವಿಷಯ ಸನ್ಮಾನ್ಯ PWD ಮಿನಿಸ್ಟರ್‌ರವರಿಗೂ ಸಹ ಗೊತ್ತಿದೆ ಆದರೆ, ಸದರಿ ರಸ್ತೆಗೆ ಸರ್ವೆ ಕೆಲಸ ನಡೆದಿಲ್ಲ ಮಾನ್ಯ ಸಚಿವರು ಹೇಳಿರುವ ಪ್ರಕಾರ ಚಿಕ್ಕನಾಯಕನ ಹಳ್ಳಿಯೊಂದರಿಂದ ಸುಮಾರು 600 ರಿಂದ 700 ಲಾರಿಗಳು ಹೋಗುತ್ತವೆ ಆದ್ದರಿಂದ, ಇದಕ್ಕೆ ತಾವೇನಾದರೂ ಮಾಡಬೇಕಾಗುತ್ತದೆ ಶಾಸನ ಸಭೆಯಲ್ಲಿ

ನಿಂತುಕೊಂಡು ಓದತಕ್ಕಂಥ ಬಜೆಟ್‌ನಲ್ಲಿರುವ ಕಾರ್ಯಕ್ರಮ ಅನುಷ್ಠಾನವಾಗದಿದ್ದರೆ ಹೇಗೆ? ಮತ್ತೊಂದು ವಿಷಯ ಹೇಳುವುದೇನೆಂದರೆ, existing road improvement ಅನ್ನು ದಯವಿಟ್ಟು ಅದರಲ್ಲಿ ನೇರಿಸಬೇಡಿ ಹೊಸದಾಗಿ ರೋಡ್ ಮಾಡಿಕೊಡಿ ಎಂದು ಅವರ ಚೀಫ್ ಇಂಜಿನಿಯರ್‌ರವನ್ನು ಕರೆದುಕೊಂಡು ಹೋಗಿ ರಸ್ತೆಯನ್ನು ತೋರಿಸಿಕೊಂಡು ಬಂದಿದ್ದೇವೆ ಈ ರಸ್ತೆ ಮಾಡಿದರೆ, ಈಗ ಇರತಕ್ಕಂಥ ಟೌನ್‌ಗಳೆಲ್ಲಾ ಬೈ ಪಾಸ್ ಆಗುತ್ತದೆ ಇದರ ಬಗ್ಗೆ ಮಾನ್ಯ ರೇವಣ್ಣನವರು ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ರಸ್ತೆ ಮಾಡಿ ಟೋಲ್ ಕಲೆಕ್ಟ್ ಮಾಡಿದ್ದಾರೆ ನಾವು ರಾತ್ರಿ ಬಸ್‌ನಲ್ಲಿ ಹೊರಟರೆ ನಾಳೆ ಮಧ್ಯಾಹ್ನ ಅಥವಾ ಸಾಯಂಕಾಲ ಇಲ್ಲಿಗೆ ಮುಟ್ಟುತ್ತೇವೆ ಈ ಪರಿಸ್ಥಿತಿಯಿಂದ ಏನು ಪ್ರಯೋಜನ ಇಲ್ಲ ಆದ್ದರಿಂದ ಎಷ್ಟು ಟೋಲ್ ಕಲೆಕ್ಟ್ ಮಾಡಿದ್ದೀರಿ ಎಂಬುದನ್ನು ಮತ್ತು ಅದನ್ನು ಏನು ಮಾಡಿದ್ದೀರೆಂಬುದನ್ನು ತಿಳಿಸಬೇಕು

**ಶ್ರೀ ಹೆಚ್ ಡಿ ರೇವಣ್ಣ.** ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಚಿಕ್ಕನಾಯಕನಹಳ್ಳಿಯಿಂದ ಮಂಗಳೂರಿನವರೆಗೆ ರಸ್ತೆ ಮಾಡುವ ಬಗ್ಗೆ ಹೇಳಿದರು ಆದರೆ, ಅದು ಚಿಕ್ಕನಾಯಕ್ಕನ ಹಳ್ಳಿಯಿಂದ ಹಾಸನದವರೆಗೆ ಮಾತ್ರ ಮಾಡುವ ರಸ್ತೆ ಈಗಾಗಲೇ ಸುಮಾರು 140 ಕೋಟಿ ರೂಪಾಯಿಗಳ ಡಿಪಿಆರ್ ಆಗಿದೆ ಇದು ಈಗ ಆರ್ಥಿಕ ಇಲಾಖೆಗೆ ಹೋಗಿದೆ ಆರ್ಥಿಕ ಇಲಾಖೆಯಿಂದ ಅನುಮತಿ ತೆಗೆದುಕೊಂಡ ನಂತರ ಸಚಿವ ಸಂಪುಟದ ಅನುಮತಿಯನ್ನೂ ಸಹ ತೆಗೆದುಕೊಂಡು BOT ಮೇಲೆ ಟೆಂಡರ್ ಕರೆದು ಆ ಕೆಲಸವನ್ನು ಮಾಡಲಾಗುತ್ತದೆ

**ಶ್ರೀ ಜೆ ಸಿ ಮಾಧುಸ್ವಾಮಿ.** ಇರತಕ್ಕಂಥ ರಸ್ತೆಯ ಮೇಲೆ ಈ ರಸ್ತೆಯನ್ನು ಮಾಡಬಾರದು ಬೇರೆ ರಸ್ತೆಯನ್ನು ಅಭಿವೃದ್ಧಿ ಪಡಿಸಬೇಕೆಂದು ನಾವು ಕೇಳಿದ್ದೇವೆ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ಟೌನ್ ಎಲ್ಲಾ ಪಾಸ್ ಆಗುವುದಾದರೆ ಆ ರಸ್ತೆಯ ಅಗತ್ಯತೆ ನಮಗೆ ಇಲ್ಲ ಆದ್ದರಿಂದ ನಿಮ್ಮ ಇಲಾಖೆಯವರು ಹಾಲಿ ಇರತಕ್ಕಂಥ ರಸ್ತೆಯನ್ನು ಅಭಿವೃದ್ಧಿ ಮಾಡುತ್ತೀರೋ ಅಥವಾ ಹೊಸ ರಸ್ತೆಯನ್ನು ಅಭಿವೃದ್ಧಿಪಡಿಸುತ್ತೀರೋ ಎನ್ನತಕ್ಕಂಥದನ್ನು ತಾವು ಹೇಳಬೇಕು ನಾವು ಈಗಾಗಲೇ ಯಾವುದೇ ತಾಪತ್ರೆಯ ಇಲ್ಲದ

ಜಾಗವನ್ನು ತೋರಿಸಿ ರಸ್ತೆ ಮಾಡಿಕೊಡುವುದಕ್ಕೆ ಹೇಳಿದ್ದೇವೆ ಆದ್ದರಿಂದ ಇದನ್ನು ತಾವು ಕನ್ಸಿಡರ್ ಮಾಡುತ್ತೀರಾ?

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಅಧ್ಯಕ್ಷರೆ, ಆ ವಿಷಯ ಏನೆಂಬುದನ್ನು ನಾನು ಕರೆಕ್ಟ್ ಆಗಿ ನೋಡಿ ಹೇಳುತ್ತೇನೆ

**ಒಪ್ಪಂದಗಳನ್ನು ಮರು ಪರಿಶೀಲಿಸುವುದು**

158 (1257) ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಪ್ರಿಲ್ 2006ರಿಂದ ಜನವರಿ 2007ರ ಅವಧಿಯಲ್ಲಿ ಎಂ ಎಂ ಟಿ ಸಿ ನಿಗದಿಪಡಿಸಿದ ಕಬ್ಬಿಣದ ಲಂಪ್ಸ್ ಮತ್ತು ಫೈನ್ಸ್‌ಗಳ ಬೇರೆ ಬೇರೆ ಗುಣಮಟ್ಟದ ಅದಿರಿನ ಬೆಲೆ ಏನು (ತಿಂಗಳವಾರು, ಪ್ರತಿ ವಾರದ ವಿವರ ನೀಡುವುದು),

ಆ) ಸರ್ಕಾರಿ ಸ್ವಾಮ್ಯದ ಎಂ ಎಂ ಎಲ್ ಸಂಸ್ಥೆ ಈ ಅವಧಿಯಲ್ಲಿ ಯಾವ ಯಾವ ಗುಣಮಟ್ಟದ ಅದಿರನ್ನು ತಾನಾಗಲೀ ಇಲ್ಲವೇ ಬೇರೆ ಯಾವುದಾದರೂ ಸಂಸ್ಥೆ ಅಥವಾ ವ್ಯಕ್ತಿಯಿಂದಾಗಲೀ ಗುತ್ತಿಗೆ ಆಧಾರದ ಮೇಲೆ ತೆಗೆಯಿಸಿ ಮಾರಾಟ ಮಾಡಿದ ಮೇಲ್ಕಂಡ ಅದಿರಿನ ಬೆಲೆ ಹಾಗೂ ಪ್ರಮಾಣ ಎಷ್ಟು (ತಿಂಗಳುವಾರು, ಪ್ರತಿ ವಾರದ, ಸಂಸ್ಥೆ ಹಾಗೂ ವ್ಯಕ್ತಿವಾರು ವಿವರ ನೀಡುವುದು),

ಇ) ಇದು ಎಂ ಎಂ ಟಿ ಸಿ ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಇದೆಯೇ ಅಥವಾ ಹೆಚ್ಚಿದೆಯೇ,

ಈ) ಕಡಿಮೆ ಇದ್ದಲ್ಲಿ ಆ ದರದಲ್ಲಿ ಮಾರಾಟ ಮಾಡಲು ಕಾರಣಗಳೇನು, (ಒಪ್ಪಂದವಿದ್ದಲ್ಲಿ ಅದರ ಪ್ರತಿ ನೀಡುವುದು),

ಉ) ಈ ಅವಧಿಯಲ್ಲಿ ಎಂ ಎಂ ಎಲ್ ಯಾವುದಾದರೂ ಒಪ್ಪಂದವನ್ನು ಮರು ಪರಿಶೀಲಿಸಿ ಹೆಚ್ಚಿನ ಬೆಲೆ ನಿಗದಿಪಡಿಸಿದೆಯೇ, ನಿಗದಿಪಡಿಸಿದ್ದಲ್ಲಿ ಅದಕ್ಕೆ ಕಾರಣಗಳೇನು,

ಊ) ಇದರಿಂದ ಸಂಸ್ಥೆಗೆ ಆದ ಲಾಭ ಏನು,

ಋ) ಇದೇ ರೀತಿ ಕ್ರಮ ಕೈಗೊಳ್ಳಲು ಬೇರೆ ಬೇರೆ ಸಂಸ್ಥೆ ಹಾಗೂ ವ್ಯಕ್ತಿಗಳ ಜೊತೆ ಮಾಡಿದ ಒಪ್ಪಂದಗಳನ್ನು ಮರು ಪರಿಶೀಲಿಸಲು ಇರುವ ತೊಂದರೆಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)